ಇನ್ನೊಂದು ಆತಂಕದ ವಿಷಯವೆಂದರೆ; ನಮ್ಮ ಮಾವ ಅದ್ಯಾಕೋ ಪಂಚೆಯನ್ನು ಗಟ್ಟಿಯಾಗಿ ಕಟ್ಟಿಕೊಳ್ಳುವುದಿಲ್ಲ. ಹಗುರವಾಗಿ ಹಾಗೇ ಸುತ್ತಿಕೊಂಡು ಬಿಡುತ್ತಾರೆ. ಸೊಂಟದಲ್ಲಿ ಪಟ್ಟಾಗಿ ಕೂರದ ಆ ವಸ್ತ್ರ ನಿಲ್ಲದೆ ಬಹಳ ಸಲ ಉದುರಿ ಬೀಳುತ್ತಿರುತ್ತದೆ. ಸದ್ಯ, ಪಟ್ಟಾಪಟ್ಟೆಯ ದೊಡ್ಡ ನಿಕ್ಕರ್ ಒಳಗಿರುವುದರಿಂದ ಅಂಥ ಅನಾಹುತಗಳೇನು ನಡೆಯುವುದಿಲ್ಲ ಎಂಬುದು ಸಂತಸದ ವಿಷಯ. ಪಂಚೆ ಉಟ್ಟುಕೊಂಡು ಆಸ್ಪತ್ರೆಗೆ ಹೋಗುವುದಿಲ್ಲ ಎನ್ನುವುದು ಮತ್ತೊಂದು ಸಮಾಧಾನದ ವಿಷಯ. ಕೆಲ ಯಜಮಾನ ಮನುಷ್ಯರು ಈ ಬಗ್ಗೆ ಅಷ್ಟಾಗಿ ತಲೆಕೆಡಿಸಿಕೊಳ್ಳುವುದಿಲ್ಲ.

ಒಮ್ಮೆ ಅವರ ಮನೆಯ ಮುಂದೆ ಒಂದು ಆಟೊ ಬರ್‍ರೆಂದು ದೂಳೆಬ್ಬಿಸಿಕೊಂಡು ಬಂದು ನಿಂತಿತು. ಸುಸ್ತಾದ ರೋಗಿಯೊಬ್ಬನನ್ನು ಅದು ಹೊತ್ತು ತಂದಿತ್ತು. ಮಾವ ಮಧ್ಯಾಹ್ನ ಊಟ ಮುಗಿಸಿ ಕೂತಿದ್ದರು. ಬಂದವರು ಆಟೊದಲ್ಲೇ ಕುಳಿತೇ, 'ಸಾರ್ ಸೀರಿಯಸ್ ಕೇಸ್ ಬೇಗ ಬನ್ನಿ' ಎಂದು ಕೂಗಿಕೊಂಡರು. ಲೂಸಾಗಿ ಕಟ್ಟಿಕೊಂಡಿದ್ದ ಪಂಚೆಯಲ್ಲೇ ದಿಢೀರೆಂದು ಎದ್ದ ಅವರು ಸ್ಟೆತಾಸ್ಕೋಪ್ ಹಿಡಿದುಕೊಂಡು ಮನೆಯ ಅಂಗಳಕ್ಕೆ ಓಡಿದರು. ಆಟೊ ಒಂದು ಹಳ್ಳಿಯಿಂದ ಬಂದಿತ್ತು. ಅದರಲ್ಲಿ ಕನಿಷ್ಠವೆಂದರೂ ಎಂಟ್ಹತ್ತು ಜನ ಅಂಟಿಕೊಂಡು ಕೂತಿದ್ದರು. ವಿಚಿತ್ರವೆಂದರೆ ಡಾಕ್ಟ್ರು ಬಂದರೆಂಬ ಸೌಜನ್ಯಕ್ಕಾದರೂ ಆಟೊದೊಳಗಿದ್ದ ಒಬ್ಬರೂ ಕೆಳಗಿಳಿಯಲಿಲ್ಲ. ಇಳಿದರೆ ಎಲ್ಲಿ ತಮ್ಮ ಜಾಗ ಹೋಗಿ ಬಿಡುವುದೋ ಎಂಬ ಜಾಗ್ರತೆಯಲ್ಲೇ ಅವರೆಲ್ಲಾ ಕುಳಿತಿದ್ದರು. 'ಈ ಡಾಕ್ಟ್ರು ಒಂದೊಂಮ್ಮೆ ಆಗಲ್ಲ ಅಂದ್ರೆ ಸರ್‍ರಂತ ಬ್ಯಾರೆ ಕಡೆ ಹೋಗ್ಬೇಕಲ್ಲ' ಎನ್ನುವ ಸ್ಥಿತಿಯಲ್ಲೇ ಅವರೆಲ್ಲಾ ಇದ್ದಂತೆ ಕಂಡಿತು. 'ಡಾಕ್ಟ್ರು ಪೇಸಂಟ್ ನೋಡ್ತಿನಿ ಅನ್ನೋ ಖಾಯಮಾತಿ ಆದ್ಮ್ಯಾಲೆ ಇಳಿಯಾನಂತೆ ಈಗೇನ್ ಅವಸ್ರಾ' ಎಂದು ತಮ್ಮಲ್ಲೇ ಗೊಣಗಿಕೊಳ್ಳುತ್ತಿದ್ದರು.

ಇದ ಕಂಡು ಕೆಂಡದ ಮಳೆಯಾದ ಮಾವ, 'ನಿಮ್ಮಲ್ಲಿ ಪೇಷೆಂಟು ಯಾರ್‍ರೋ' ಎಂದು ಜೋರು ಮಾಡಿದರು. ಆಗ ಅದರಲ್ಲೊಬ್ಬ 'ಇಲ್ಲೇ ಒಳಗೆ ಮಲಗವನೇ ಸಾರ್' ಎಂದು ಹೊರಗಿನ ಜಗತ್ತಿಗೆ ಕಾಣದ ಒಂದು ಕಡೆ ಕೈ ತೋರಿಸಿದನು. ಅವರ ನಡುವೆ ಹುಗಿದು ಹೋಗಿದ್ದ ಆ ರೋಗಿ ಹೊರ ನಿಂತ ನಮ್ಮ ಕಣ್ಣಿಗೆ ಕಾಣುತ್ತಲೇ ಇರಲಿಲ್ಲ. ಅಕ್ಕಪಕ್ಕ ಕೂತವರು ಹಚ್ಚಿದ್ದ ಬೀಡಿಯ ದಮ್ಮು ಮುಗಿಸುತ್ತಾ, 'ಎದೆ ನೋವು ಅಂತಿದ್ದ. ಆರ್ಟ್‌ಫೇಲ್ ಆಗಿರ್ಬೇಕೇನಪ್ಪ' ಎಂದು ನಿರ್ಲಿಪ್ತವಾಗಿ ಹೇಳಿ ಅವರ ಮಧ್ಯೆ ಬೆಡ್‌ಶೀಟ್‌ನಲ್ಲಿ ಸುತ್ತಿದ್ದ ಆತ್ಮವೊಂದನ್ನು ತೋರಿಸಿದರು. ಅವನ ಸ್ಥಿತಿ ನಿಜವಾಗಿಯೂ ಚಿಂತಾಜನಕವಾಗಿತ್ತು. ಆಟೊ ಹತ್ತಿರ ಹೋದ ಮಾವ ಕಿಟಾರಂಥ ಕಿರುಚಿ, 'ಲೇ ಕತ್ತೆಗಳ ಮೊದಲು ನೀವು ಕೆಳಗೆ ಇಳೀರೋ. ಸೀರಿಯಸ್ಸಾದವನಿಗೆ ಗೋಣಿಚೀಲದಲ್ಲಿ ತರಕಾರಿ ತುಂಬ್ಕೊಂಡು ಬಂದ್ಹಂಗೆ ತಂದಿದ್ದಿರಲ್ಲೋ. ಅವನಿಗೆ ಉಸಿರಾಡಕೋ ಜಾಗ ಉಳಿಸಿಲ್ಲವಲ್ಲೋ. ನಿಮ್ ದರಿದ್ರ ವಾಸನೇಗೆ ಅವನು ಗೊಟಕ್ ಅಂದಿರ್ತಾನೆ ಇಳಿರೋ ಬದ್ಮಾಶ್ ನನಮಕ್ಕಳಾ' ಎಂದು ಒದರಾಡಿದರು.

ಡಾಕ್ಟ್ರು ಕೂಗಿದ ಹೊಡೆತಕ್ಕೆ ಎದ್ದೆವೋ ಬಿದ್ದೆವೋ ಎಂದು ಆಟೊದಲ್ಲಿ ಆತು ಕುಳಿತಿದ್ದ ಜನ ಜೇನುನೊಣಗಳಂತೆ ಈಚೆ ಬರತೊಡಗಿದರು. ಬಡಪಾಯಿ ಪೇಶಂಟ್ ನೋಡಲು ಆಟೊದೊಳಗೆ ಬಗ್ಗಿದ್ದ ನಮ್ಮ ಮಾವನ ಪಕ್ಕದಿಂದಲೇ ರಭಸದಿಂದ ಮನುಷ್ಯನೊಬ್ಬ ಇಳಿದನು. ಅವನಾಗಲೇ ಬೆಳ್ಳಂಬೆಳಗ್ಗೇನೆ ಒಂದು ಕೈ ನೋಡಿಕೊಂಡಿದಾನೆ ಎಂಬುದನ್ನು ಅವನ ಎಬಡಾತಬಡಾ ಹೆಜ್ಜೆಗಳೇ ಸೂಚಿಸುತ್ತಿದ್ದವು. ಪ್ರಾಯಶಃ ಮಾವನವರು ಬೈದ ಕೊನೆಯ ವಾಕ್ಯ 'ದರಿದ್ರ ವಾಸನೆ' ಅವನ ಕುರಿತೇ ಇರಬೇಕು. ಆತ ಸೊಟ್ಟಂಬಟ್ಟ ಕಾಲು ಆಡಿಸಿಕೊಂಡು ಇಳಿಯುವಾಗ ಲೂಸಾಗಿ ಕಟ್ಟಿದ್ದ